ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 113/2014

(ಚಾ.ಸಾ.2 ಪ್ರಾ.ಸಾ.5)
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
ದಿನಾಂಕಃ07.04.2021.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕುಮಾರ |
| ತಂದೆಯ ಹೆಸರು | ಃ | ಮಹಾಲಿಂಗಂ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ರಿಯಲ್ ಎಸ್ಟೇಟ್ ವ್ಯವಹಾರ |
| ವಾಸ | ಃ | ಕಿರ್ಲೋಸ್ಕರ್ ಫೌಂಡ್ರಿ, ಯಶವಂತಪುರ |

**ಮುಖ್ಯವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ಗೊತ್ತು ಆಕೆ ನಾಯಕ ಜಾತಿಗೆ ಸೇರಿದವರು. ಶ್ರೀನಿವಾಸನಾಯ್ಕ ಚಾಸಾ-1ರವರ ಮಗ ಆತ ಸಹ ನಾಯಕ ಜಾತಿಗೆ ಸೇರಿದವರು. ಶ್ರೀನಿವಾಸನಾಯ್ಕ ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿದ್ದರು. ಆತ 8ನೇ ಆರೋಪಿ ಪದ್ಮಾಬಾಯಿರವರನ್ನು ವಿವಾಹವಾಗಿದ್ದರು. ನಾನು ಪದ್ಮಬಾಯಿರವರನ್ನು ನೋಡಿದ್ದೇನೆ. ಎಲ್ಲಾ ಆರೋಪಿಗಳನ್ನು ನಾನು ನೋಡಿದ್ದೇನೆ. ಅವರನ್ನು ನೋಡಿದರೆ ನಾನು ಗುರುತಿಸಬಲ್ಲೆ, ಆರೋಪಿಗಳು ಗೈರು ಹಾಜರಾಗಿದ್ದು ಹಾಜರಾತಿಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಆರೋಪಿಗಳ ಗುರುತಿಸುವಿಕೆಗಾಗಿ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

2. ಶ್ರೀನಿವಾಸನಾಯ್ಕ ಮತ್ತು ಪದ್ಮಾವತಿಗೆ ಎರಡು ಮಕ್ಕಳು ಜನಿಸಿದ್ದರು. ಇಬ್ಬರು ಮೊದಲು ಚೆನ್ನಾಗಿದ್ದರು ನಂತರ ಇಬ್ಬರು ಗಲಾಟೆ ಮಾಡಿಕೊಂಡಿದ್ದರು. ಪದ್ಮಾವತಿ ತನ್ನ ತವರು ಮನೆಗೆ ಹೊರಟು ಹೋಗಿದ್ದರು. ಮೃತ ಶ್ರೀನಿವಾಸನಾಯ್ಕ ದಿಃ05.08.2013ರಂದು ಕಿರ್ಲೋಸ್ಕರ್ ಫೌಂಡ್ರಿಯ ನಮ್ಮ ಮನೆಯ ಬಳಿಗೆ ಬಂದಿದ್ದರು. ಮನೆಯ ಮೇಲೆ ಬ್ಯಾಂಕಿನಲ್ಲಿ ಸಾಲ ಪಡೆದಿದ್ದೇನೆ ಸಾಲದ ಹಣ ಪಾವತಿ ಮಾಡಲು ಮನೆ ಮಾರಾಟ ಮಾಡಬೇಕು ಆದ್ದರಿಂದ ಮನೆಯನ್ನು ಮಾರಾಟ ಮಾಡಿಸಿ ಇಲ್ಲವಾದರೆ ಕೆಳಗಿನನಾಯಕಂಡ್ರಹಳ್ಳಿಯಲ್ಲಿರುವ ಎರಡು ಎಕರೆ ಜಮೀನನ್ನಾದರೂ ಮಾರಾಟ ಮಾಡಿಸುವಂತೆ ನನಗೆ ಕೇಳಿದ್ದರು. ನಾನು ಜಮೀನು ಮಾರಾಟ ಮಾಡಿಸಲು ನನ್ನ ಪರಿಚಯದ ಉಮೇಶರವರಿಗೆ ಹೇಳಿದ್ದೆ.

3. ನಾನು, ಉಮೇಶರವರು ಮೃತ ಶ್ರೀನಿವಾಸನಾಯ್ಕರವರನ್ನು ಕಾರಿನಲ್ಲಿ ಕೆಳಗಿನನಾಯಕಂಡ್ರಹಳ್ಳಿಯ ಮೃತ ಶ್ರೀನಿವಾಸನಾಯ್ಕರವರ ಜಮೀನಿನ ಬಳಿ ಕರೆದುಕೊಂಡು ಹೋಗಿದ್ದೆವು. ಅಲ್ಲಿಂದ ವಾಪಸ್ಸು ಬರಬೇಕಾದರೆ 1ರಿಂದ 7ನೇ ಆರೋಪಿಗಳಾದ ಜಯಬಾಯಿ, ರವಿನಾಯ್ಕ, ಸಂತೋಷನಾಯ್ಕ, ನೀಲಾಬಾಯಿ, ನಟರಾಜನಾಯ್ಕ, ನಂಜುಂಡಚಾರಿ, ಪದ್ಮಾಬಾಯಿ ಮೃತ ಶ್ರೀನಿವಾಸನಾಯ್ಕರವರ ಮೇಲೆ ಹಲ್ಲೆ ಮಾಡಿದ್ದರು, ದೊಣ್ಣೆ ಮತ್ತು ಮಚ್ಚಿನಲ್ಲಿ ಹಲ್ಲೆ ಮಾಡಿ ಕಾಲಿಗೆ ಹಗ್ಗ ಕಟ್ಟಿ ದಾರಿ ಉದ್ದಕ್ಕೂ ಆತನನ್ನು ಎಳೆದುಕೊಂಡು ಹೋಗಿದ್ದರು. ನಾನು ಮತ್ತು ಉಮೇಶ, ಆರೋಪಿಗಳಿಗೆ ಮೃತ ಶ್ರೀನಿವಾಸನಾಯ್ಕರವರನ್ನು ಬಿಟ್ಟುಬಿಡುವಂತೆ ಕೇಳಿಕೊಂಡಿದ್ದರೂ ಬಿಟ್ಟಿರಲಿಲ್ಲ, ಮೃತ ಶ್ರೀನಿವಾಸನಾಯ್ಕರವರನ್ನು ಆರೋಪಿಗಳು ಆಟೋದಲ್ಲಿ

ಹಾಕಿಕೊಂಡು ಹೋಗಿದ್ದರು. ಸರಿದ ಆಟೋವನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿ ಆಟೋಗೆ ಸಂಬಂಧಿಸಿದ ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ-9ರಿಂದ 12 ಎಂದು ಗುರುತಾಗಿರುತ್ತವೆ. ಆರೋಪಿಗಳು ಮೃತ ಶ್ರೀನಿವಾಸನಾಯ್ಕರವರಿಗೆ ಹಲ್ಲೆ ಮಾಡಿದಾಗ ಸಂಜೆ ಸುಮಾರು 06.00ರಿಂದ 07.00 ಗಂಟೆ ಸಮಯವಾಗಿರಬಹುದು.

4. ಆರೋಪಿಗಳಿಗೆ ಮೃತ ಶ್ರೀನಿವಾಸನಾಯ್ಕರವರನ್ನು ಬಿಟ್ಟುಬಿಡುವಂತೆ ನಾವು ಕೇಳಿಕೊಂಡಾಗ ಆರೋಪಿಗಳು ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ದೂರು ಕೊಟ್ಟರೇ ನಿಮ್ಮನ್ನು ಸಹ ಇದೇ ರೀತಿ ಮಾಡುತ್ತೇವೆ ಎಂದು ನಮ್ಮನ್ನು ಹೆದರಿಸಿದ್ದರು. ನಾನು ಮತ್ತು ಉಮೇಶ ಭಯಬಿದ್ದು ಬೆಂಗಳೂರಿಗೆ ವಾಪಸ್ಸು ಬಂದಿದ್ದೆವು.

5. ನಾವು ಮೃತ ಶ್ರೀನಿವಾಸನಾಯ್ಕರವರ ತಾಯಿಗೆ ಆರೋಪಿಗಳು ಆತನ ಮೇಲೆ ಹಲ್ಲೆ ಮಾಡಿ ಆಟೋದಲ್ಲಿ ಎತ್ತಿಹಾಕಿಕೊಂಡು ಹೋಗಿದ್ದನ್ನು ತಿಳಿಸಿದ್ದೆವು. ಆತನ ತಾಯಿ ಪೋಲಿಸ್ ಠಾಣೆಯಲ್ಲಿ ಜಮೀನು ಮಾರಾಟ ಮಾಡಲು ಹೋಗಿದ್ದ ನನ್ನ ಮಗ ವಾಪಸ್ಸು ಬಂದಿರುವುದಿಲ್ಲ ಎಂದು ದೂರು ನೀಡಿದ್ದರು. ಮೃತ ಶ್ರೀನಿವಾಸನಾಯ್ಕರವರ ತಾಯಿ ದೂರು ನೀಡಿದ್ದ ನಂತರ ಪೋಲಿಸರು ನನ್ನನ್ನು ಘಟನೆ ಬಗ್ಗೆ ವಿಚಾರಿಸಿದ್ದರು. ಘಟನೆ ಸ್ಥಳದ ಬಗ್ಗೆ ವಿಚಾರಿಸಿದ್ದರು. ನಾನು ಮೃತರಿಗೆ ಆರೋಪಿಗಳು ಹಲ್ಲೆ ಮಾಡಿದ್ದ ವಿಚಾರವನ್ನು ಮತ್ತು ಸ್ಥಳದ ಬಗ್ಗೆ ಹೇಳಿದ್ದೆ.

6. ಪೋಲಿಸರು ನನ್ನನ್ನು ಮೊದಲು ದೊಡ್ಡಬಳ್ಳಾಪುರದ ಪೋಲಿಸ್ ಠಾಣೆಗೆ ಕರೆಸಿದ್ದರು. ನಾನು ಆರೋಪಿಗಳು ಮೃತರಿಗೆ ಹಲ್ಲೆ ಮಾಡಿದ ವಿಚಾರ ತಿಳಿಸಿದ ನಂತರ ಕೆಳಗಿನನಾಯಕಂಡ್ರಹಳ್ಳಿಯ ಸರ್ಕಾರಿ ಶಾಲೆಯ ಬಳಿಗೆ ಪೋಲಿಸರನ್ನು ಕರೆದುಕೊಂಡು ಹೋಗಿದ್ದು ಆ ಶಾಲೆಯ ಮುಂಭಾಗದಲ್ಲಿ ಎಂದು ಮನೆ ಸಹ ಇತ್ತು. ಪೋಲಿಸರಿಗೆ ನಾನು ಆರೋಪಿಗಳು ಮೃತರಿಗೆ ಹೊಡೆದ ಮತ್ತು ಎಳೆದುಕೊಂಡು ಹೋಗಿದ್ದ ಸ್ಥಳ ಮತ್ತು ಆಟೋಗೆ ಎತ್ತಿಹಾಕಿಕೊಂಡಿದ್ದ ಸ್ಥಳವನ್ನು ತೋರಿಸಿದ್ದೆ. ಪೋಲಿಸರು ಸ್ಥಳದಲ್ಲಿ ಮಹಜರ್ ಬರವಣಿಗೆ ಮಾಡಿದ್ದರು. ನಾನು ಮಹಜರಗೆ ಸಹಿ ಮಾಡಿದ್ದೆ. ಸಾಕ್ಷಿಗೆ ಸ್ಥಳ ಮಹಜರ್ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಮಹಜರ್ ಅನ್ನು ನಿಪಿ-14 ಎಂದು ಸಾಕ್ಷಿ ರುಜುವನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

7. **ಪಾಟೀ ಸವಾಲು:** ಆರೋಪಿ ಪರ ವಕೀಲರು ಕಲಂ 231(2) ಸಿಆರ್‌ಪಿಸಿ ಅನ್ವಯ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು